ದಿನಾಂಕಃ 24.02.2026 ರಂದು ಡಿ.ಡಬ್ಲ್ಯೂ-2 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನನ್ನ ಹೆಂಡತಿ ಮೋನೀಷಾ ಪ್ರತಿವಾದಿ ವಕೀಲರ ಕಛೇರಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಸದರಿ ಮೋನಿಶಾ 1ನೇ ಪ್ರತಿವಾದಿಯ ಮಗಳು ಎಂದರೆ ಸರಿ. ಹಾಗಾದರೆ ನಾನು 1ನೇ ಪ್ರತಿವಾದಿಯ ಅಳಿಯ ಎಂದರೆ ಸರಿ. ಸದರಿ ವಿಚಾರವನ್ನು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರ ಬರೆಯಲುಯಾರು ಮಾಹಿತಿಯನ್ನು ಕೊಟ್ಟಿರುತ್ತಾರೆ ಎಂದರೆ ನೇ ಪ್ರತಿವಾದಿ. ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳನುನ ಓದಿ ಸಹಿ ಹಾಕಿರುತ್ತೀರಾ ಎಂದರೆ ಇಲ್ಲ. 1ನೇ ಪ್ರತಿವಾದಿ ಸಾಕ್ಷಿ ಹೇಳಲು ಕರೆದ ಕಾರಣ ಬಂದಿರುತ್ತೇನೆ ಎಂದರೆ ಸರಿ.

2. ಯಾವ ವರ್ಷದಿಂದ ಯಾವ ವರ್ಷದ ವರೆಗೂ ಈರಮ್ಮ ರವರು 1ನೇ ಪ್ರತಿವಾದಿಯ ಮನೆಯಲ್ಲಿದ್ದರು ಎಂದರೆ 10 ವರ್ಷ ಇದ್ದರು. 2008 ರಲ್ಲಿ ಇದ್ದರು. ಈರಮ್ಮ ರವರು 1ನೇ ಪ್ರತಿವಾದಿಗೆ ಮರಣಶಾಸನ ಪತ್ರ ಮಾಡಿಕೊಡುವ ವಿಚಾರ ನನಗೆ ಹೇಳಿದ್ದರಾ ಎಂದರೆ ಮನೆಯ ಬಳಿ ಬಂದು ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ಏನೆಂದು ಕರೆದುಕೊಂಡು ಹೋಗಿರುತ್ತಾರೆ ಎಂದರೆ 1ನೇ ಪ್ರತಿವಾದಿಗೆ ವಿಲ್ ಮಾಡುತ್ತಿದ್ದೇನೆ ಎಂದು ಕರೆದುಕೊಂಡು ಹೋಗಿರುತ್ತಾರೆ ಆಗ ನಾನು ನನ್ನ ಮನೆಯಲ್ಲಿದ್ದೆ. ಮನೆಯಿಂದ ನನ್ನನ್ನು ಯಾರು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಈರಮ್ಮ. ಈರಮ್ಮ ಒಬ್ಬರೇ ಬಂದಿರುತ್ತಾರಾ ಎಂದರೆ ಹೌದು. ಈರಮ್ಮ ಯಾವುದಾದರೂ ದಾಖಲಾತಿಯನ್ನು ತಂದಿದ್ದಾರಾ ಎಂದರೆ ವಿಲ್ ಮಾಡಿಸಲು ಪತ್ರ ತಂದಿರುತ್ತಾರೆ. ಸದರಿ ಪತ್ರ ಬರವಣಿಗೆ ಆಗಿತ್ತಾ ಎಂದರೆ ಹೌದು. ಸದರಿ ಪತ್ರಕ್ಕೆ ಎಲ್ಲಿ ಸಹಿ ಮಾಡಿಸಿಕೊಂಡಿರುತ್ತಾರೆ ಎಂದರೆ ಲಕ್ಷ್ಮಿಕಾಂತ್ ವಕೀಲರು ನೊಂದಣಿ ಕಛೇರಿಯಲ್ಲಿ ಮಾಡಿಸಿರುತ್ತಾರೆ. ವಕೀಲರ

ಕಛೇರಿಗೆ ನನ್ನನ್ನು ಕರೆಸಿದ್ದರಾ ಎಂದರೆ ಹೌದು. ವಕೀಲರ ಕಛೇರಿಗೆ ನಾನು ಮತ್ತು ಈರಮ್ಮ ಹೋಗಿರುತ್ತೇವೆ ಎಂದರೆ ಆಟೋ ಚಾಲಕ ಪಾಸಿಲ್ ಬಂದಿರುತ್ತಾರೆ. ಸದರಿ ಪಾಸಿಲ್ ರವರು ಪತ್ರಕ್ಕೆ ಎಲ್ಲಿ ಸಹಿ ಮಾಡಿರುತ್ತಾರೆ ಎಂದರೆ ನೊಂದಣಿ ಕಛೇರಿಯಲ್ಲಿ.

3. ದಾವಾ ಸ್ವತ್ತು ಈರಮ್ಮ ರವರಿಗೆ ಹೇಗೆ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಯಾವ ಊರಿನ ಜಮೀನು, ಅದರ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಎಷ್ಟು ಎಂದರೆ ಮಲಗಳಲೆ ಗ್ರಾಮದ ಸರ್ವೆ ನಂ. 63/1 ರಲ್ಲಿ 2 ಎಕರೆ ಇರಬಹುದು. ಅದರ ಚಕ್ಕುಬಂದಿ ಏನು ಎಂದರೆ ಗೊತ್ತಿಲ್ಲ. ನಿಡಿ-4 ನ್ನು ವಕೀಲರು ಓದಿ ತಿಳಿಸಿರುತ್ತಾರಾ ಎಂದರೆ ಇಲ್ಲ. ನೊಂದಣಿ ಕಛೇರಿಗೆ ಈರಮ್ಮರವರೊಂದಿಗೆ 1ನೇ ಪ್ರತಿವಾದಿ ಬಂದಿರುತ್ತಾರಾ ಎಂದರೆ ಇಲ್ಲ. ಈರಮ್ಮರವರನ್ನು ನೊಂದಣಿ ಕಛೇರಿಗೆ ಯಾರು ಕರೆದುಕೊಂಡು ಬಂದಿರುತ್ತಾರೆ ಎಂದರೆ ಅವರೇ ಬಂದಿರುತ್ತಾರೆ. ವಿಲ್ ಗೆ ಸಹಿ ಮಾಡಿರುತ್ತಾರಾ ಅಥವಾ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರಾ ಎಂದರೆ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ಎಷ್ಟು ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ ಎಂದರೆ ಸುಮಾರು ಹಾಕಿರುತ್ತಾರೆ ಎಷ್ಟು ಎಂದು ಗೊತ್ತಿರುವುದಿಲ್ಲ. ನಿಡಿ-4 ಎಷ್ಟು ಪುಟಗಳು ಇತ್ತು ಎಂದರೆ ಗೊತ್ತಿಲ್ಲ.

4. ಈರಮ್ಮ ರವರು ನನ್ನನ್ನು ವಿಲ್ ಮಾಡುವ ಉದ್ದೇಶದಿಂದ ಕರೆದಿರುವುದಿಲ್ಲ ಮತ್ತು ನಾನು ಅವರೊಂದಿಗೆ ನೊಂದಣಿ ಕಛೇರಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಹೆಂಡತಿ ಮತ್ತು 1ನೇ ಪ್ರತಿವಾದಿ ಸೇರಿ ವೃದ್ದಾಪ್ಯ ವೇತನವನ್ನು ಕೊಡಿಸುವುದಾಗಿ ತಿಳಿಸಿ ಈರಮ್ಮರವರನ್ನು ಕರೆದುಕೊಂಡು ಹೋಗಿ ನಿಡಿ-4 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-4 ನ್ನು ಮಾಡುವ ಉದ್ದೇಶ ಈರಮ್ಮ ರವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.